OS No. 11/2024
DW-4

**(ಇಂದು ದಿಃ 06-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ವಾದಿ ಪರ ಶ್ರೀ.TVP ವಕೀಲರಿಂದಃ-</u>**

ಮೃತ ನಾಗಮಣಿ ನನಗೆ ಪರಿಚಯ ಇದ್ದರು. ನಾನು ಶಾಸ್ತ್ರೆರ ನಗರದ ಸೋಮಶೇಖರವರ ಮನೆಯಲ್ಲಿ ಬಾಡಿಗೆಗೆ ಇದ್ದೆ. ಅವರಿಂದ ನನಗೆ ನಾಗಮಣಿ ಪರಿಚಯ ಆಗಿತ್ತು. ನಾಗಮಣಿರವರ ಮನೆ ಹಲಕರಟಿ ಗಲ್ಲಿಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸೋಮಶೇಖರವರ ಮನೆಯಲ್ಲಿ ಬಾಡಿಗೆಗೆ ಇದ್ದೆ ಅವರಿಂದ ನಾಗಮಣಿ ಪರಿಚಯ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗಮಣಿ ಅವಿದ್ಯಾವಂತೆ ಎಂದರೆ ಸರಿ. ಅವಳಿಗೆ ಓದಲು ಬರೆಯಲು ಬರುತ್ತಿರಲಿಲ್ಲ ಎಂದರೆ ಸರಿ. ದಾನ ಪತ್ರ ತಯಾರಿಸುವ ಕಾಲಕ್ಕೆ ನಾಗಮಣಿರವರಿಗೆ 70 ರಿಂದ 75 ವಯಸ್ಸು ಆಗಿತ್ತು ಎಂದರೆ ಸರಿ. ನಾಗಮಣಿಗೆ ಅರಳು ಮರಳು ಇತ್ತು ಮತ್ತು ಅವಳಿಗೆ ಸರಿಯಾಗಿ ತಿಳಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾಗಮಣಿರವರ ಕುಟುಂಬದ ಸದಸ್ಯರ ಸಹಿಗಳನ್ನು ಒಪ್ಪಿ ಗೆ ಸಾಕ್ಷಿದಾರರು ಎಂದು ಪಡೆದುಕೊಳ್ಳಬೇಕು ಎಂದು ನನಗೆ ಹನಿಸಿಲ್ಲ. ನಾಗಮಣಿ 5ನೇ ಪ್ರತಿವಾದಿ ನನ್ನನ್ನು ಚೆನ್ನಾಗಿ ನೊಡಿಕೊಳ್ಳುತ್ತಿದ್ದು ಕಾರಣ ಆತನಿಗೆ ನಾನು ಸರ್ವೆ ನಂಬರ 827/2 ರಲ್ಲಿ 3 ಎಕರೆ 29 ಗುಂಟೆ ಜಮೀನನ್ನು ದಾನ ಮಾಡುತ್ತಿದ್ದೇನೆ ಅದಕ್ಕೆ ದಾನ ಪತ್ರ ತಯಾರಿಸಿ ಎಂದು ನನಗೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾನ ಪತ್ರ ತಯಾಸಿದ ನಂತರ ನಾಗಮಣಿಗೆ ಓದಿ ಹೇಳಿದ್ದು ಅದನ್ನು ತಿಳಿದುಕೊಂಡು ನಾಗಮಣಿ ಹೆಬ್ಬಟ್ಟಿನ ಗುರುತು ಹಾಕಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ಹೆಸರಿಗೆ ಮುಟೇಷನ್ ಆಗಿದೆ ಎಂದು 1ನೇ ಪ್ರತಿವಾದಿ ನನಗೆ ಹೇಳಿದರು ನಾನು ಸದರಿ ಮುಟೇಷನ್ ನೋಡಿಲ್ಲ. 5 ನೇ ಪ್ರತಿವಾದಿ ನನ್ನ ಸ್ನೇಹಿತನಿದ್ದು ಕಾರಣ ನಾನು 5ನೇ ಪ್ರತಿವಾದಿ ಮತ್ತು ಅವರ ತಂದೆ 1ನೇ ಪ್ರತಿವಾದಿ ಮಾತು ಕೇಳಿಕೊಂಡು ಸುಳ್ಳು ದಾನ ಪತ್ರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾಗಮಣಿಗೆ ಗೊತ್ತಿಲ್ಲದಂತೆ ದಾನ ಪತ್ರ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಾಗಮಣಿ ದಾನ ಪತ್ರಕ್ಕೆ ಎಂದು ತಿಳಿದು ಹೆಬ್ಬಟ್ಟಿನ ಗುರುತು ಹಾಕಿಲ್ಲ ಎಂದರೆ ಸರಿಯಲ್ಲ. ನಾನು 1 ಮತ್ತು 5 ನೇ ಪ್ರತಿವಾದಿಯರಿಗೆ ಅನೂಕೂಲ

ಮಾಡಿಕೋಡುವ ಸಲುವಾಗಿ ಸುಳ್ಳು ದಾಖಲಾತಿ ಸೃಷ್ಟಿ ಮಾಡಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**